ಓ.ಎಸ್. ನಂ. 21/2014

ಪಿ.ಡಬ್ಲ್ಯೂ: 01 (Sharanakumar)

ದಿನಾಂಕಃ 25.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ಈ ದಾವೆಯನ್ನು ನನ್ನ ತಂದೆ ನನ್ನ ಚಿಕ್ಕಪ್ಪನವರಾದ 1 ನೇ ಪ್ರತಿವಾದಿ ಹಾಗೂ ದೊಡ್ಡಪ್ಪ ಚನ್ನಬಸಪ್ಪರವರ ವಿರುದ್ಧ ಸಲ್ಲಿಸಿರುತ್ತಾರೆ. ನನ್ನ ದೊಡ್ಡಪ್ಪ ಸುಮಾರು 50 ವರ್ಷಗಳಿಂದ ಹಿಂದೆ ಅವಿವಾಹಿತರಾಗಿ ಮೃತಪಟ್ಟಿರುತ್ತಾರೆ. ಅವರಿಗೆ ಮಕ್ಕಳು ಸಹ ಇರಲಿಲ್ಲ. ನನ್ನ ತಂದೆಯ ತಂದೆಯ ಹೆಸರು ಸಿದ್ದಪ್ಪ. ಸಿದ್ದಪ್ಪರವರ ಒಡಹುಟ್ಟಿದವರ ವಿವರ ನನಗೆ ಗೊತ್ತಿಲ್ಲ. ಸಿದ್ದಪ್ಪರವರ ಒಡಹುಟ್ಟಿದವರ ವಿವರನ್ನು ವಾದಪತ್ರದಲ್ಲಿ ಬರೆಸಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಜ್ಜನಾದ ಸಿದ್ದಪ್ಪರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯ ಒಡಹುಟ್ಟಿದವರೊಂದಿಗೆ ವಿಭಾಗ ಆಗಿರುವುದಿಲ್ಲ ಎಂದು ವಿಭಾಗ ಕೋರಿ ನನ್ನ ತಂದೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಅವರ ಕುಟುಂಬಕ್ಕೆ ದಾವಾ ಸ್ವತ್ತು ಒಂದೇ ಆಸ್ತಿಯಾಗಿರುತ್ತದೆ.

ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಗಳನ್ನು ಹಾಜರುಪಡಿಸಿದ್ದು ಅದರಲ್ಲಿ 1 ನೇ ಪ್ರತಿವಾದಿ ಹಾಗೂ ಚನ್ನಬಸಪ್ಪರವರ ಹೆಸರು ಇದೆ. ನಿಪಿ 1 ರಲ್ಲಿ ಕಾಣುತ್ತಿರುವ ಚನ್ನಪ್ಪ ಎಂದರೆ ನನ್ನ ದೊಡ್ಡಪ್ಪ ಆಗಿರುತ್ತಾರೆ. ಸಾಕ್ಷಿ ಮುಂದುವರೆದು ಚನ್ನಪ್ಪ ಎಂದರೆ ನಮ್ಮ ತಂದೆಯ ದೊಡ್ಡಪ್ಪ. ಚನ್ನಪ್ಪರವರಿಗೆ ಮದುವೆ ಆಗಿದೆಯೋ ಇಲ್ಲವೊ ನನಗೆ ಗೊತ್ತಿಲ್ಲ. ಅವರ ವಂಶಸ್ಥರು ಈಗ ಯಾರು ಇರುವುದಿಲ್ಲ. ಸಾಕ್ಷಿ ಮುಂದುವರೆದು ಅವರು ಮದುವೆಯಾಗಿರುವುದಿಲ್ಲ. ನಿಪಿ 1 ರ ಶರಣಪ್ಪ, ಚನ್ನಬಸಪ್ಪ, ಗುರುಸಿದ್ದಪ್ಪ ತಂದೆ ಸಿದ್ದಪ್ಪ ಅರ್ಧ ಭಾಗ ಇದ್ದು ಸದರಿ ಶರಣಪ್ಪ ನನ್ನ ತಂದೆಯಾಗಿರುತ್ತಾರೆ. ಗುರುಸಿದ್ದಪ್ಪ ನನ್ನ ತಂದೆಯ ತಮ್ಮ ಆಗಿರುತ್ತಾರೆ. ಚನ್ನಬಸಪ್ಪ ನನ್ನ ತಂದೆಯ ಅಣ್ಣ ಆಗಿರುತ್ತಾರೆ. ಅವರುಗಳ ಹೆಸರಿಗೆ ಅರ್ಧ ಭಾಗ ಇದೆ ಎಂದು ಹಾಗೂ ಚನ್ನಪ್ಪರವರ ಹೆಸರಿಗೆ ಅರ್ಧ ಭಾಗ ಇದೆ ಎಂದು ನಿಪಿ 1 ರಲ್ಲಿ ಕಾಣುತ್ತಿದೆ ಎಂದರೆ ಹೌದು.

ನನ್ನ ಪ್ರಕಾರ ಸಿದ್ದಪ್ಪನ ಮಕ್ಕಳಿಗೆ ದಾವಾ ಸ್ವತ್ತು ಸರ್ವೆ ನಂಬರ್ 92 ರ 14.36 ರಲ್ಲಿ ಅರ್ಧ ಭಾಗ ಇತ್ತು. ಸರ್ವೆ ನಂಬರ್ 92 ಎಷ್ಟು ವಿಭಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 92 ಹಿಸ್ಸಾ ಆದ ಪಹಣಿ ಪತ್ರಿಕೆಗಳನ್ನು ನಾನು ಹಾಜರುಪಡಿಸಿರುತ್ತೇನೆ. ಆದರೆ ಎಷ್ಟು ಹಿಸ್ಸಾ ಆಗಿದೆ ಎಂದು ನನಗೆ ಗೊತ್ತಿಲ್ಲ.

ನಿಪಿ 6 ರ ಪ್ರಕಾರ ಸರ್ವೆ ನಂಬರ್ 92/1 ಎಂದು ಇದ್ದು, ಅದರ ವಿಸ್ತೀರ್ಣ 1.82 ಇದ್ದು ಅದು ಚನ್ನಪ್ಪ, ಶರಣಪ್ಪ, ಚನ್ನಬಸಪ್ಪ, ಗುರುಸಿದ್ದಪ್ಪರವರ ಹೆಸರಿಗೆ ಇರುತ್ತದೆ. ನಿಪಿ 7 ರ ಪ್ರಕಾರ ಸರ್ವೆ ನಂಬರ್ 92/2 ಎಂದು ಇದ್ದು, ಅದರ ವಿಸ್ತೀರ್ಣ 4.00 ಇದ್ದು ಅದು 2 ನೇ ಪ್ರತಿವಾದಿ ಗುರುಸಿದ್ದಮ್ಮರವರ ಹೆಸರಿಗೆ ಇರುತ್ತದೆ. ನಿಪಿ 8 ರ ಪ್ರಕಾರ ಸರ್ವೆ ನಂಬರ್ 92/3 ಎಂದು ಇದ್ದು, ಅದರ ವಿಸ್ತೀರ್ಣ 5.00 ಇದ್ದು ಅದು 3 ನೇ ಪ್ರತಿವಾದಿಯ

ಹೆಸರಿಗೆ ಇರುತ್ತದೆ. ನಿಪಿ 9 ರ ಪ್ರಕಾರ ಸರ್ವೆ ನಂಬರ್ 92/4 ಎಂದು ಇದ್ದು, ಅದರ ವಿಸ್ತೀರ್ಣ 3.52 ಇದ್ದು ಅದು ನನ್ನ ತಂದೆಯ ಹೆಸರಿಗೆ ಇರುತ್ತದೆ. ಸಾಕ್ಷಿ ಮುಂದುವರೆದು ನಿಪಿ 6-9 ಪಹಣಿ ಪತ್ರಿಕೆಗಳನ್ನು ನನ್ನ ತಂದೆ ಮೃತಪಟ್ಟ ನಂತರ ಸೃಷ್ಟಿ ಮಾಡಿರುತ್ತಾರೆ.

ಜನವರಿ-2015 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ. ಸದರಿ ಮೇಲೆ ಹೇಳಿದ ಪಹಣಿಗಳ ಕಾಲಂ 10 ರಲ್ಲಿ ಕಾಣುತ್ತಿರುವ ಆದೇಶ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಆದೇಶದ ಸಂಖ್ಯೆ ನಮೂದು ಇದೆ ಎಂದರೆ ಹೌದು. ಸದರಿ ಆದೇಶವನ್ನು ತೆಗೆದು ನೋಡುವ ಪ್ರಯತ್ನ ಮಾಡಿರುವುದಿಲ್ಲ. ಯಾವ ಆಧಾರದ ಮೇರೆಗೆ 2 ಮತ್ತು 3 ನೇ ಪ್ರತಿವಾದಿಗಳು ಅಕ್ರಮವಾಗಿ ತಮ್ಮ ಹೆಸರುಗಳಿಗೆ ದಾವಾ ಆಸ್ತಿಗಳನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದು ನಾನು ಹೇಳುತ್ತಿದ್ದೇನೆ ಎಂದರೆ ಮೊದಲು ದಾವಾ ಆಸ್ತಿ ಜಂಟಿಯಾಗಿದ್ದು ನಂತರ ಪ್ರತ್ಯೇಕವಾದ ಕಾರಣ ಅದು ಅಕ್ರಮವಾಗಿದೆ ಎಂದು ಹೇಳುತ್ತಿದ್ದೇನೆ. ನಾನು ಯಾವುದೇ ದಾಖಲಾತಿಯನ್ನು ನೋಡಿ ಹೇಳುತ್ತಿಲ್ಲ. ನನ್ನ ತಂದೆ ಕಾಲಂ 10 ರಲ್ಲಿ ಕಾಣುತ್ತಿರುವ ಆದೇಶವನ್ನು ಅಂದರೆ ವಿಭಾಗವಾದ ಆದೇಶವನ್ನು ಡಿಡಿಎಲ್ಆರ್ ಬಳ್ಳಾರಿರವರಲ್ಲಿ ಪ್ರಶ್ನಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಮತ್ತು ಬಸಯ್ಯರವರು ತಕರಾರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 19.02.2005 ರಂದು ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ಪ್ರಶ್ನಿಸಿರುವ ಬಗ್ಗೆ ನನ್ನ ತಂದೆ ನನಗೆ ತಿಳಿಸಿರುವುದಿಲ್ಲ. ಅವರು ಮೇಲ್ಮನವಿ ಸಲ್ಲಿಸಿದ ಬಗ್ಗೆ ಅಥವಾ ಅದರಲ್ಲಿ ದಿನಾಂಕ 19.02.2005 ರಂದು ಆದ ಆದೇಶದ ಬಗ್ಗೆ ನನಗೆ ಯಾವುದೇ ವಿಚಾರ ತಿಳಿಸಿರುವುದಿಲ್ಲ.

ಡಿ ಎಂ ಬಸಯ್ಯ ತಂದೆ ಚರಂತಯ್ಯ ಯಾರು ಎಂದರೆ ನನಗೆ ಗೊತ್ತಿಲ್ಲ. ಗುರುಸಿದ್ದಮ್ಮ ಗಂಡ ಡಿ ಎಂ ಬಸಯ್ಯ ಯಾರು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳ ಹೆಸರು ಪಹಣಿ ಪತ್ರಿಕೆಯಲ್ಲಿ ಕಾಣುತ್ತಿರುವ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಸಾಕ್ಷಿ ಮುಂದುವರೆದು ಅವರು ನನಗೆ ಖುದ್ದಾಗಿ ಗೊತ್ತಿಲ್ಲ. ಸದರಿಯವರು ಕಾನಮಡಗು ಗ್ರಾಮದವರು.

ನನ್ನ ತಂದೆಯವರು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಆದ ವ್ಯವಹಾರಗಳಿಗೆ ದಾವಾ ಹೂಡುವ ಸಮಯದಲ್ಲಿ ಋಣಭಾರ ಪತ್ರವನ್ನು ತೆಗೆಸಿರುವುದಿಲ್ಲ, ನಾನು ಸಹ ತೆಗೆಸಿರುವುದಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಡೆದ ವ್ಯವಹಾರಗಳ ಬಗ್ಗೆ ನಾನಗಲೀ ನನ್ನ ತಂದೆಯಾಗಲೀ ಯಾವುದೇ ದಾಖಲಾತಿ ತೆಗೆಸಿರುವುದಿಲ್ಲ. 2 ಮತ್ತು 3 ನೇ ಪ್ರತಿವಾದಿಗಳ ಹೆಸರಿಗೆ ಹೇಗೆ ಪಹಣಿ ಪತ್ರಗಳು ಬಂದವು ಎಂಬ ದಾಖಲಾತಿಯನ್ನು ನಾನು ನೋಡಿದ್ದೇನೆಯೇ ಎಂದರೆ ನನ್ನ ತಂದೆ ದಾವಾ ಹೂಡುವ ಮೊದಲೇ 2012-13 ನೇ

ಓ.ಎಸ್. ನಂ. 21/2014

ಪಿ.ಡಬ್ಲ್ಯು: 01 (Sharanakumar)

ಸಾಲಿನಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಉಪನೊಂದಣಾಧಿಕಾರಿಗೆ ನೀಡಿದ ಸುಳ್ಳು ದಾಖಲಾತಿಗಳನ್ನು ನನಗೆ ನೀಡಿ ಅದರ ಬಗ್ಗೆ ಚರ್ಚೆ ಮಾಡಿರುತ್ತಾರೆ. ದಾವಾ ಹೂಡುವ ಸಮಯದಲ್ಲಿ ನನ್ನ ತಂದೆಯ ಬಳಿ 2 ಮತ್ತು 3 ನೇ ಪ್ರತಿವಾದಿಗಳು ಉಪನೊಂದಣಾಧಿಕಾರಿಗೆ ನೀಡಿದ ಸುಳ್ಳು ದಾಖಲಾತಿಗಳು ಇದ್ದವು. ಸದರಿ ಸುಳ್ಳು ದಾಖಲಾತಿಗಳ ಆಧಾರದ ಮೇರೆಗೆ 2 ಮತ್ತು 3 ನೇ ಪ್ರತಿವಾದಿಗಳ ಹೆಸರಿಗೆ ದಾವಾ ಸ್ವತ್ತುಗಳು ವರ್ಗಾವಣೆಯಾಗಿವೆ ಎಂದು ನನ್ನ ತಂದೆ ತಿಳಿಸಿರುತ್ತಾರೆ. ಸದರಿ ಸುಳ್ಳು ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ, ನನ್ನ ತಂದೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ ಮೂಲಕ ಗುರುತಿಸಲಾದ ದಾಖಲಾತಿಗಳ ಪೈಕಿ ಸದರಿ ಸುಳ್ಳು ದಾಖಲಾತಿಗಳು ಇರುವುದಿಲ್ಲ. ವಾದಿಗಳ ಪರವಾಗಿ ಗುರುತಿಸಲಾದ ದಾಖಲಾತಿಗಳು ಪೈಕಿ ಸದರಿ ಸುಳ್ಳು ದಾಖಲಾತಿಗಳು ಇರುವುದಿಲ್ಲ.

ನನ್ನ ತಂದೆ ಹಳೆಯ ಪಹಣಿಗಳ ಆಧಾರದ ಮೇರೆಗೆ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಸುಳ್ಳು ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ವಾದ ಪತ್ರದಲ್ಲಿ ಪ್ರತಿವಾದಿಗಳು ಸೃಷ್ಟಿಸಿದ ಸುಳ್ಳು ದಾಖಲಾತಿಗಳ ಬಗ್ಗೆ ಹೇಳಿರುವುದಿಲ್ಲ.

ನನ್ನ ತಂದೆಯ ದೊಡ್ಡಪ್ಪರವರಾದ ಚನ್ನಪ್ಪರವರು ತಮ್ಮ ಹಿಸ್ಸೆಯಾದ ಅರ್ಧ ಭಾಗದಲ್ಲಿ 4.00 ಎಕರೆಯನ್ನು 2 ನೇ ಪ್ರತಿವಾದಿಯ ಗಂಡನಿಗೆ ದಿಃ 17.02.1975 ರಂದು ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಅದಕ್ಕೆ ನನ್ನ ತಂದೆ ಸಹಿ ಹಾಕಿರುವುದಿಲ್ಲ.

ದಿಃ 17.02.1975 ರ ಖರೀದಿ ಪತ್ರವನ್ನು ನನ್ನ ತಂದೆ ಪರಿಶೀಲನೆ ಮಾಡಿರುತ್ತಾರೆ. ಸದರಿ ಕ್ರಯ ಪತ್ರವನ್ನು ದಾವಾ ಹೂಡುವ ಸಮಯದಲ್ಲಿ ತೆಗೆಸಿರುತ್ತಾರೋ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುವ ಕಾರಣದಿಂದ ಈ ದಾವೆಯನ್ನು ನನ್ನ ತಂದೆ ಹೂಡಿರುತ್ತಾರೆ. ವಾದ ಪತ್ರದಲ್ಲಿ ಈ ಕ್ರಯ ಪತ್ರದ ಬಗ್ಗೆ ಉಲ್ಲೇಖ ಇದೆ. ನಾನು ಸದರಿ ಕ್ರಯ ಪತ್ರವನ್ನು ಪರಿಶೀಲನೆ ಮಾಡಿರುವುದಿಲ್ಲ. ನಾನು ಕ್ರಯ ಪತ್ರವನ್ನು ಪರಿಶೀಲನೆ ಮಾಡದೇ ಅದನ್ನು ಸೃಷ್ಟಿಸಲಾಗಿದೆ ಎಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಪಹಣಿ ಪತ್ರದ ಮೇರೆಗೆ ಸೃಷ್ಟಿಯಾಗಿದೆ ಎಂದು ಹೇಳುತ್ತಿದ್ದೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಕೂಡ್ಲಿಗಿ.